# ಪ್ರೇಮವೆನಲು ಹಾಸ್ಯವೆ?

'ಕಾಮದ ಕೆಸರಿಂದ ಹುಟ್ಟಿ
ಬಂತು ಎಂಥ ವಿಮಲವು,
ಪ್ರೀತಿಯೆಂಬ ಕಮಲವು!'

ಎಂದಿದ್ದಾರೆ. ಸಾಹಿತ್ಯ ಸೃಷ್ಟಿಗೆ ಪ್ರೇಮ ಪ್ರೇರಣೆಯಾದಷ್ಟು ಬಹುಶಃ ಮತ್ತಾವುದೂ ಆಗಿರಲಾರದು. ಶ್ರೇಷ್ಠ ಕವಿಗಳಿಂದ ಮೊದಲುಗೊಂಡು, ಎರಡು ಸಾಲು ಬರೆದು ಇಂದು ಕವಿಯಾದವರೂ ಸಹ ಪ್ರೇಮದ ಪರಾಕು ಹೇಳುತ್ತಲೇ ತಮ್ಮ ಕಾವ್ಯೋದ್ಯೋಗಕ್ಕೆ ನಾಂದಿ ಹಾಡಿದ್ದಾರೆ. ಈ ಪ್ರೇಮಯಾನಕ್ಕೆ ನಿತ್ಯನೂತನ ಕವಿತೆಗಳನ್ನು ಕೊಟ್ಟು, ಪ್ರೇಮಿಗಳ ಪಾಲಿಗೆ ಆದ್ಯರಾದ ಆಧುನಿಕ ಪ್ರೇಮಕವಿ ಎಂದರೆ ನಿಸ್ಸಂದೇಹವಾಗಿ ಕೆ.ಎಸ್. ನರಸಿಂಹಸ್ವಾಮಿ ಅವರೇ.

'ಒಂದು ಹೆಣ್ಣಿಗೊಂದು ಗಂಡು
ಹೇಗೋ ಸೇರಿ ಹೊಂದಿಕೊಂಡು
ಕಾಣದೊಂದು ಕನಸ ಕಂಡು
ಮಾತಿಗೊಲಿಯದಮೃತವುಂಡು
ದುಃಖ ಹಗುರವೆನುತಿರೆ,
ಪ್ರೇಮವೆನಲು ಹಾಸ್ಯವೇ?'

ಇವರ ನಂತರ ಎಚ್.ಎಸ್. ವೆಂಕಟೇಶಮೂರ್ತಿ ಮತ್ತು ಬಿ.ಆರ್. ಲಕ್ಷ್ಮಣರಾವ್ ಈ ಕ್ಷೇತ್ರಕ್ಕೆ ತಮ್ಮ ಪ್ರೇಮಕವಿತೆ ಮತ್ತು ಗೀತೆಗಳ ವಿಪುಲ ಕೊಡುಗೆಯನ್ನೇ ನೀಡಿದ್ದಾರೆ. ಬಹಿರಂಗವಾಗಿ ಒಪ್ಪಲಾಗದನ್ನು ಕವಿತೆಯಲ್ಲಿ ಹೇಳಿ ತಲ್ಲಣಗಳನ್ನು ಸೃಷ್ಟಿಸುತ್ತಲೇ ಜೀವಕಾಮವನ್ನು ದೇವಕಾಮದ ಸ್ತರಕ್ಕೇರಿಸಿದವರು ಲಕ್ಷ್ಮಣರಾವ್. ಇದಕ್ಕೆ ಅತ್ಯುತ್ತಮ ಉದಾಹರಣೆಯಾದ ಅವರ 'ಲಿಲ್ಲಿಪುಟ್ಟಿಯ ಹಂಬಲ' ನನ್ನ ಅಚ್ಚುಮೆಚ್ಚಿನ ಕವನಗಳಲ್ಲೊಂದು.

ಇವರಂತೆಯೇ ಬಹಳಷ್ಟು ನಮ್ಮ ಸಮಕಾಲೀನ ಕವಿಗಳು ಪ್ರೇಮಕಾಮದ ಕುರಿತು ಬರೆದಂತೆಯೇ ಗಂಭೀರ ವಸ್ತು ವಿಚಾರಗಳ ಬಗ್ಗೆಯೂ ಕವಿತೆ ಬರೆದಿದ್ದಾರೆ. ಹಾಗೆಂದ ಮಾತ್ರಕ್ಕೆ ಪ್ರೇಮಕವಿತೆಗಳು ಗಂಭೀರವಲ್ಲವೆಂದಲ್ಲ. ಜೊತೆಗೆ 'ಇತ್ತೀಚಿನ ಕವಿತೆಗಳಲ್ಲಿ ಪ್ರೇಮ ಕಾಣೆಯಾಗಿದೆ, ಕವಿಗಳು ಅಕಾಲ ವೃದ್ಧಾಪ್ಯದಲ್ಲಿದ್ದಾರೆ' ಎನ್ನುವ ಮಾತೂ ಅಲ್ಲಲ್ಲಿ ಕೇಳಿಬರುತ್ತಿದೆ... ಜೊತೆಗೆ ಪ್ರೇಮ ಕವಿತೆಗಳು ಇತ್ತೀಚೆಗೆ ಕೇವಲ ಜಯಂತ ಕಾಯ್ಕಿಣಿ, ಯೋಗರಾಜ್ ಭಟ್ ಅಂತಹವರ ಚಿತ್ರಗೀತೆಗಳಿಗೆ ಸೀಮಿತವಾಗಿವೆ ಅನ್ನುವುದನ್ನೂ ಕೇಳುತ್ತಿದ್ದೇವೆ. ಆದರೆ ಚಿತ್ರಗೀತೆ ಏನೇ ಆದರೂ ಒಂದು ಸಿದ್ಧರಾಗಕ್ಕೆ ಬದ್ಧವಾದ, ಒಂದು ಸನ್ನಿವೇಶಕ್ಕೆ ಸೀಮಿತವಾದ ವಾಣಿಜ್ಯ ರಚನೆಯೇ ಹೊರತು ಒಂದು ಸರ್ವತಂತ್ರ ಸ್ವತಂತ್ರವಾದ ಕವಿತೆಗೆ ಸಮನಾಗಲಾರದು ಎಂದೇ ನನ್ನ ಅಭಿಮತ.

ಇನ್ನು, ಪ್ರೇಮ ಕವಿತೆಗಳ ಸೃಷ್ಟಿಯಲ್ಲಿ ಕವಯಿತ್ರಿಯರು ಹಿಂದೆ ಬಿದ್ದಿದ್ದಾರೆ ಎನ್ನುವ ಮಾತು ಕೇಳಿಬಂದರೂ ಅದು ಒಪ್ಪುವಂಥದಲ್ಲ. ಕನ್ನಡದಲ್ಲಿ ಭಾವತೀವ್ರತೆಯ, ಶ್ರೇಷ್ಠ ಪ್ರೇಮಕವಿತೆಗಳನ್ನು ಬರೆದ ಕವಯಿತ್ರಿಯರಲ್ಲಿ ಅಕ್ಕಮಹಾದೇವಿಗೇ ಮೊದಲ ಸ್ಥಾನ. ಅಕ್ಕ ತನ್ನ ವಚನಗಳಲ್ಲಿ ಪ್ರೇಮ ಮಾತ್ರವಲ್ಲದೇ ಕಾಮಕ್ಕೂ ಅಷ್ಟೇ ಮಹತ್ವ ಕೊಟ್ಟಿದ್ದಳು... ಅದರೆ ಅದು ದೇಹಭಾವದಿಂದ ದೇವಭಾವಕ್ಕೇರಿತ್ತು ಅಷ್ಟೇ.

'ಕೂಟದ ಸುಖವ ಆಲಿಂಗನ ನುಂಗಿತ್ತು
ಆಲಿಂಗನದ ಸುಖವ ಚುಂಬನ ನುಂಗಿತ್ತು
ಚುಂಬನದ ಸುಖವ ಪರವಶ ನುಂಗಿತ್ತು'

ಅಕ್ಕನ ಈ ಸಾಲುಗಳಲ್ಲಿ ಇರುವ ತೀವ್ರತೆ ಎಂಥವರಲ್ಲೂ ಪ್ರೇಮಕಾಮದ ಸ್ಪಂದನವನ್ನು ಹುಟ್ಟಿಸದೇ